(ಸಾಕ್ಷಿಗೆ ದಿನಾಂಕ: 23.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಬಿ.ಜಿ.ಆರ್., ವಾದಿ ಪರ ವಕೀಲರಿಂದಃ**

ನಾನು 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಹಾಗೂ ದಾವಾ ಸ್ವತ್ತುಗಳು ನನಗೆ ಗೊತ್ತು. ವಾದಿ ಪರವಾಗಿ ಒಂದು ಕರಾರನ್ನು ಮಾಡಿಕೊಟ್ಟಿರುತ್ತೇನೆ. ಸದರಿ ಕರಾರನ್ನು ನವೆಂಬರ್-2014ರಲ್ಲಿ ಮಾಡಿಕೊಟ್ಟಿರುತ್ತೇನೆ. ವಾದಿ ಪಾಚಾಪೀರ್ ರವರಿಂದ 2ನೇ ಪ್ರತಿವಾದಿ ರೂ.10 ಲಕ್ಷ ಹಣ ಪಡೆದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ದಿನಾಂಕಃ 15.08.2012ರ ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸದರಿ ವಿಭಾಗ ಪತ್ರವನ್ನು ನಾನು, ನನ್ನ ತಂದೆ, ಅಣ್ಣ-ತಮ್ಮಂದಿರು ಹಾಗೂ ಅಕ್ಕ-ತಂಗಿಯರೆಲ್ಲಾ ಸೇರಿ ಮಾಡಿಕೊಂಡಿರುತ್ತೇವೆ. ದಿನಾಂಕಃ 15.08.2012ರ ವಿಭಾಗ ಪತ್ರದಂತೆ ಖಾತೆ-ಪಹಣಿ ಆಗಿರುತ್ತದೆ. ವಿಭಾಗವಾದ ನಂತರ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತೇವೆ. ಯಾವ ವರ್ಷದಲ್ಲಿ ಮಾಡಿಕೊಂಡಿರುತ್ತೇವೆ ಎಂದು ನೆನಪಿಲ್ಲ. ಸದರಿ ಮ್ಯೂಟೇಶನ್ ನಲ್ಲಿ ದಿನಾಂಕಃ 15.08.2012ರ ವಿಭಾಗ ಪತ್ರದಂತೆ ಖಾತಾ ವರ್ಗಾವಣೆಯಾಗಿರುತ್ತದೆ ಎಂದು ಬರೆಯಲಾಗಿದೆ. ವಿಭಾಗಪತ್ರ ಹಾಗೂ ಮ್ಯೂಟೇಶನ್ ರಿಜಿಸ್ಟರ್ ಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆಯಿಲ್ಲ. ದಾವಾ ಸ್ವತ್ತು ವಿಭಾಗದ ಪ್ರಕಾರ ನನ್ನ ರಂಗಪ್ಪರವರ ಭಾಗಕ್ಕೆ ಬಂದಿತ್ತು. ಕ್ರಯದ ಕರಾರು ಆದಾಗ ಖಾತೆ-ಪಹಣಿಗಳು ನನ್ನ ತಂದೆಯ ಹೆಸರಿನಲ್ಲೇ ಇದ್ದವು. ಖಾತೆ-ಪಹಣಿಗಳು ನನ್ನ ತಂದೆಯ ಹೆಸರಿನಲ್ಲಿದ್ದ ಕಾರಣದಿಂದಲೇ ನಾವೆಲ್ಲಾ ಕ್ರಯದ ಕರಾರಿಗೆ ಸಹಿ ಮಾಡಿಕೊಟ್ಟೆವು. ನಾನು ಮೇಲೆ ಹೇಳಿದಂತೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ ಹಾಗೂ ವಿಭಾಗದಲ್ಲಿ ರಂಗಪ್ಪನ ಭಾಗಕ್ಕೆ ದಾವಾ ಸ್ವತ್ತು ಬಂದಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಪಾಚಾಪೀರ್ ಮತ್ತೊಂದು ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಮತ್ತೊಂದು ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಅದಕ್ಕೆ ನಾನು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ.

ನನ್ನ ಅಣ್ಣ ರಂಗಪ್ಪ ಹಾಗೂ ವಾದಿ ಪಾಚಾಪೀರ್ ರವರು ಒಟ್ಟಾಗಿ ಅಡಿಕೆ ವ್ಯಾಪಾರ ಮಾಡುತ್ತಿದ್ದರು. ಸದರಿಯವರು ಒಟ್ಟಾಗಿ ಯಾವತ್ತೂ ಅಡಿಕೆ ವ್ಯಾಪಾರ ಮಾಡುತ್ತಿರಲಿಲ್ಲ, ಅವರು ಪ್ರತ್ಯೇಕವಾಗಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಿ.ಪಿ.1ರ ದಾಖಲೆಯನ್ನು ನನ್ನ ವಕೀಲರ ಬಳಿ ಓದಿಸಿ ತಿಳಿದುಕೊಂಡಿರುತ್ತೇನೆ. ಸುಮಾರು 7-8 ವರ್ಷಗಳ ಹಿಂದೆಯೇ ಆ

ರೀತಿ ಓದಿಸಿ ತಿಳಿದುಕೊಂಡಿರುತ್ತೇನೆ. ನಿ.ಪಿ.1ರ ದಾಖಲೆಯಲ್ಲಿ ಬರೆದಿರುವ ವಿಷಯಗಳು ಸತ್ಯಕ್ಕೆ ದೂರವಾದ ವಿಷಯಗಳು. ನಿ.ಪಿ.1ರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು ಅವುಗಳನ್ನು ತಿಳಿದುಕೊಂಡೇ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ತೋರಿಸಲಾದ ನಿ.ಪಿ.1(ಹೆಚ್) ಕೆ.ಆರ್. ಗೋವಿಂದರಾಜು ಎಂದು ಬರೆದಿರುವ ಸಹಿ ನನ್ನದೇ ಆಗಿರುತ್ತದೆ. ನಾವು 80 ಕ್ವಿಂಟಾಲ್ ಹಸಿ ಅಡಿಕೆಯನ್ನು ರೂ.10 ಲಕ್ಷದ ಬಡ್ಡಿಗೋಸ್ಕರ ವಾದಿಗೆ ನೀಡುತ್ತಿದ್ದೆವು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯಿಂದ ಪಡೆದ ಹಣದ ಭದ್ರತೆಗಾಗಿ ನಿ.ಪಿ.1 ದಾಖಲೆಯನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ವಾದಿ ಪಾಚಾಪೀರ್ ರವರು ದಾವೆ ದಾಖಲಿಸುವ ಮೊದಲು ನನಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ಆ ನೋಟೀಸ್ ನನಗೆ ತಲುಪಿತ್ತು. ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.